**ಪ್ರಧಾನ ಸಿವಿಲ್ ಮತ್ತು ಜೆ. ಎಂ. ಎಫ್. ಸಿ., ನ್ಯಾಯಾಧೀಶರು ಹರಿಹರ**
**ಸಿ ಸಿ ನಂ. 9/2024**

**ಫಿರ್ಯಾದಿದಾರರು:**
ಸರ್ಕಾರದ ಪರವಾಗಿ ಹರಿಹರ
ಗ್ರಾಮಾಂತರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತರು**
ಪ್ರವೀಣ ಪಿ.ಬಿ. ತಂದೆ ಬಸವರಾಜಪ್ಪ
ಮತ್ತು ಇತರರು

**ದೋಷಾರೋಪಣೆ**

**ಶ್ರೀಮತಿ ಫಕೀರವ್ವ ಕೆಳಗೇರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮ ಮೇಲೆ ಅಂದರೆ:**

1. ಪ್ರವೀಣ ಪಿ.ಬಿ. ತಂದೆ ಬಸವರಾಜಪ್ಪ, 29 ವರ್ಷ, ವಾಸ: 2 ನೇ ಕ್ರಾಸ್, ಎ.ಕೆ. ಕಾಲೋನಿ, ಹರಿಹರ ನಗರ, ದಾವಣಗೆರೆ ಜಿಲ್ಲೆ.

2. ಅನಿಲಕುಮಾರ್ ತಂದೆ ದಂಡೆಪ್ಪ, 28 ವರ್ಷ, ವಾಸ: ಬನ್ನಿಕೋಡು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಹೊರಿಸುವ ಆರೋಪಣೆ ಏನೆಂದರೆ

ದಿನಾಂಕ: 13.08.2023 ರಂದು ರಾತ್ರಿ 10.30 ಗಂಟೆಗೆ ಹರಿಹರ ಗ್ರಾಮಾಂತರ ಪೋಲೀಸ್ ಠಾಣಾ ಸರಹದ್ದಿನ ಹನಗವಾಡಿ ಗ್ರಾಮದ ಬಳಿ, ಎನ್.ಹೆಚ್.48 ರಸ್ತೆಗೆ ನಿರ್ಮಿಸಿರುವ ಸೇತುವೆಯ ಕೆಳಗೆ ಹಾದು ಹೋಗಿರುವ ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ಬದಿಯಲ್ಲಿ ಚಾಸಾ.1 ರವರು ತನ್ನ ರೂ.10,000/- ಮೌಲ್ಯದ OnePlus Nord CE 2 Lite 5G ಮೊಬೈಲನ್ನು ಕೈಯಲ್ಲಿ ಹಿಡಿದುಕೊಂಡು ಮೊಬೈಲ್ ನೋಡುತ್ತಾ ನಡೆದುಕೊಂಡು ಬರುತ್ತಿದ್ದಾಗ ಆರೋಪಿತರಾದ ನೀವುಗಳು ಸುಲಿಗೆ ಮಾಡುವ ಸಮಾನ ಉದ್ದೇಶ ಹೊಂದಿ 1 ನೇ ಆರೋಪಿತನಾದ ನಿನ್ನ ಮಾಲೀಕತ್ವದಲ್ಲಿರುವ ಕೆಎ-17/ಹೆಚ್ ಎಂ-5933 ನೇ BAJAJ CT 110 ಬೈಕಿನಲ್ಲಿ ಕೃಷ್ಣಪ್ಪ ಸ್ಮಾರಕ ಭವನದ ಕಡೆಯಿಂದ ಸರ್ವೀಸ್ ರಸ್ತೆ ಮುಖಾಂತರ ಹರಿಹರ ಶಿವಮೊಗ್ಗ ರಸ್ತೆಗೆ ಬಂದು ಪಿರ್ಯಾದಿ ನಡೆದುಕೊಂಡು ಬರುತ್ತಿದ್ದುದ್ದನ್ನು ಗಮನಿಸಿ ಬೈಕಿನಲ್ಲಿ ಆತನ ಬಳಿ ಹೋಗಿ 1 ನೇ ಆರೋಪಿತನಾದ ನೀನು ಪಿರ್ಯಾದಿ ಕೈಯಲ್ಲಿದ್ದ ಮೇಲ್ಕಂಡ ಮೊಬೈಲನ್ನು ಸುಲಿಗೆ ಮಾಡಿಕೊಂಡು ಬೈಕಿನಲ್ಲಿ ಪರಾರಿಯಾಗಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವುಗಳು, ಭಾರತೀಯ ದಂಡ ಸಂಹಿತೆ ಕಲಂ.392 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.।

Pr

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ:11.07.2024
ಸ್ಥಳ: ಹರಿಹರ

11/7/24

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.

Pr. v.

h.